UASB Library
Newspaper Clippings
Saturday 17-12-2022 Pg .1
Jai Kisan

ನಾಳೆಯಿಂದ 5 ದಿನ ಕೃಷಿ ವಿವಿ ಯುವಜನೋತ್ಸವ

ಬೆಂಗಳೂರು: ಅಖಿಲ ಭಾರತ 21ನೇ ಕೃಷಿ ಯುವಜನೋತ್ಸವ ಭಾನುವಾರದಿಂದ (ಡಿ.18) ಐದು ದಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕ್ಯಾಂಪಸ್ ಜಿಕೆವಿಕೆಯಲ್ಲಿ ನಡೆಯಲಿದೆ. ವಿವಿಧ ರಾಜ್ಯಗಳ 74 ಕೃಷಿ ಸಂಬಂಧಿ ವಿವಿಗಳ 2,500 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. 5 ವಿಷಯಗಳಲ್ಲಿ ಒಟ್ಟು 18 ಸ್ಪರ್ಧೆಗಳು ಜರುಗಲಿವೆ. ಸಂಗೀತ ವಿಭಾಗದಲ್ಲಿ ಭಾರತೀಯ ಲಘು ಸಂಗೀತ, ಭಾರತೀಯ ಸಮೂಹ ಗಾಯನ, ನೃತ್ಯದಲ್ಲಿ, ಸಮೂಹ ನೃತ್ಯ, ಸಾಹಿತ್ಯ ವಿಭಾಗದಲ್ಲಿ ರಸಪ್ರಶ್ನೆ, ಚರ್ಚಾ ಸ್ಪರ್ಧೆ ಮತ್ತು ಆಶುಭಾಷಣ ಸ್ಪರ್ಧೆ, ರಂಗಭೂಮಿ ವಿಭಾಗದಲ್ಲಿ ಏಕಾಂಕ ನಾಟಕ, ಲಘು ಪ್ರಹಸನ, ಮೂಕಾಭಿನಯ ಮತ್ತು ಏಕ ಪಾತ್ರಾಭಿನಯ, ಲಲಿತಕಲೆ ವಿಭಾಗದಲ್ಲಿ ಸ್ಥಳದಲ್ಲಿ ಚಿತ್ರರಚನೆ, ಬಿತ್ತಿಪತ್ರ, ತುಣುಕುಚಿತ್ರ, ಮಣ್ಣಿನ ಆಕೃತಿ, ರಂಗೋಲಿ ಮತ್ತು ವ್ಯಂಗ್ಯಚಿತ್ರ ರಚನೆ ಸ್ಪರ್ಧೆಗಳು ನಡೆಯಲಿವೆ ಎಂದು ಕುಲಪತಿ ಡಾ. ಎಸ್.ವಿ. ಸುರೇಶ್ ತಿಳಿಸಿದ್ದಾರೆ.



17-12-2022
Vijayavani Pg 5A



Wheat sowing rises 3% this season on 286.5 lakh hectares

Wheat acreage has increased 3% so far in the ongoing rabi season at 286.5 lakh hectares mainly on higher sowing area in Madhya Pradesh and Uttar Pradesh, government data showed. The area under coverage for wheat, which is the major crop in rabi (winter-sown) season, stood at 278.25 lakh hectares in the same period last year. Sowing of rabi crops starts from October. PTI

17-12-2022
Hindu Pg 14

21ನೇ ಕೃಷಿ ಯುವಜನೋತ್ಸವದ ಲಾಂಛನ ಬಿಡುಗಡೆ



ಬೆಂಗಳೂರು,ಡಿ.16:ಅಖಿಲಭಾರತ 21ನೇ ಕೃಷಿ ಯುವಜನೋತ್ಸವದ ಲಾಂಛನವನ್ನು ದಿನಾಂಕ:15–12–2022ರಂದು ಕೃಷಿವಿ, ಜಿಕೆವಿಕೆ, ಬೆಂಗಳೂರಿನಲ್ಲಿ , ಬಿಡುಗಡೆ ಮಾಡಿದರು. 2023ನೇ ಜನವರಿ 18 ರಿಂದ 22 ರವರೆಗೆ ಐದು ದಿನ ಜಿಕೆವಿಕೆಯಲ್ಲಿ ಅಖಿಲ ಭಾರತ 21ನೇ ಕೃಷಿ ಯುವಜನೋತ್ಸವ ಜರುಗಲಿದೆ. ಎಂದು ಕುಲಪತಿ ಡಾ. ಎಸ್.ವಿ.ಸುರೇಶ ತಿಳಿಸಿದರು.

ಯುವಜನೋತ್ಸವದಲ್ಲಿ ವಿವಿಧ ರಾಜ್ಯಗಳ 74 ಕೃಷಿ ಸಂಬಂಧಿ ವಿಶ್ವವಿದ್ಯಾನಿಲಯಗಳು ಭಾಗವಹಿಸಲಿವೆ. ಸುಮಾರು 2,500 ಪ್ರತಿನಿಧಿಗಳು ಯುವಜನೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಈ ಹಿಂದೆ ಎರಡು ಭಾರಿ 2008 ಮತ್ತು 2013 ರಂದು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು,ಅಖಿಲ ಭಾರತ ಕೃಷಿ ಯುವಜನೋತ್ಸವನ್ನು ಆಯೋಜಿಸಿತ್ತು. ಯುವಜನೋತ್ಸವದಲ್ಲಿ5ವಿಷಯಗಳಲ್ಲಿ 18 ಸ್ಪರ್ಧೆಗಳು ಜರುಗಲಿವೆ.

ಸಂಗೀತದಲ್ಲಿ:ಭಾರತೀಯ ಲಘು ಸಂಗೀತ, ಭಾರತೀಯ ಸಮೂಹ ಗಾಯನ (ದೇಶಭಕ್ತಿಗೀತೆ), ಭಾರತೀಯ ಸಮೂಹ ಗಾಯನ (ಜಾನಪದಗೀತೆ),ನೃತ್ಯದಲ್ಲಿ:ಸಮೂಹ ನೃತ್ಯ (ಜನಪದ), ಸಾಹಿತ್ಯದಲ್ಲಿ: ದಸಪ್ರಶ್ನೆ, ವಾಕ್ ಸ್ಪರ್ಧೆ, ಚರ್ಚಾ ಸ್ಪರ್ಧೆ ಮತ್ತು ಆಶುಭಾಷಃ ಸ್ಪರ್ಧೆ, ರಂಗಭೂಮಿಯಲ್ಲಿ:ಏಕಾಂಕನಾಟಕ, ಲಘು ಪ್ರಹಸನ, ಮೂಕಾಭಿನಯ ಮತ್ತು ಏಕ ಪಾತಾಭಿನಯ, ಲಲಿತಕಲೆಯಲ್ಲಿಸ್ಥಳದಲ್ಲಿಚಿತ್ರರಚನೆ, ಬಿತ್ತಿ ಪತ್ರರಚನೆ, ತುಣುಕು, ಚಿತ್ರ ರಚನೆ, ಮಣ್ಣಿನ ಆಕೃತಿ ರಚನೆ, ರಂಗೋಲಿ ಮತ್ತು ವ್ಯಂಗ ಚಿತ್ರ ರಚನೆ ಸ್ಪರ್ಧೆಗಳು ಜರುಗಲಿವೆ ಎಂದು ಮಾಹಿತಿ ನೀಡಿದರು.

ಡಾ. ಕೆ.ಸಿ. ನಾರಾಯಣಸ್ವಾಮಿ, ಶಿಕ್ಷಣ ನಿರ್ದೇಶಕರು,ಡಾ.ಎನ್.ಬಿ. ಪ್ರಕಾಶ್, ಡೀನ್ (ಕೃಷಿ), ಡಾ: ಬಸವೇಗೌಡ,ಕುಲಸಚಿವರು,ಡಾ: ಕೆ. ನಾರಾಯಣಗೌಡ, ವಿಸ್ತರಣಾ ನಿರ್ದೇಶಕರು, ಮತ್ತು ಡಾ: ಕೆ. ಶಿವರಾಮು,ಹಿರಿಯ ವಾರ್ತಾತಜ್ಞರು ಉಪಸ್ಥಿತರಿದ್ದರು.

16-12-2022
Sanjevani Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

ಪ್ರತಿವರ್ಷ 40,000 ಎಕರೆ ಬೆಳೆ ವ್ಯಾಪ್ತಿ ವಿಸ್ತರಣೆ | ಸ್ಥಳೀಯ ಉದ್ಯೋಗ ಸೃಷ್ಟಿ

ಬಯಲುಸೀಮೆಗೂ ಅಡಕೆ ಮೋಹ

■ ಅರವಿಂದ ಅಕ್ಕಾಪುರ ಶಿವಮೊಗ್ಗ
ರಮೇಶ ಜಹಗೀರದಾರ್ ದಾವಣಗೆರೆ

ಕೃಷಿ ಹಾಗೂ ತೋಟಗಾರಿಕೆಯಿಂದ ರೈತರು ವಿಮುಖರಾಗುತ್ತಿದ್ದಾರೆ ಎಂಬುದು ಇತ್ತೀಚೆಗೆ ಕೇಳಿಬರುತ್ತಿರುವ ಮಾತು. ಆದರೆ, ಅದಕ್ಕೆ ಅಪವಾದ ಈ ಬೆಳೆ. ಬೇರೆ ಬೆಳೆಯಲ್ಲಿ ತೊಡಗಿಕೊಂಡವರನ್ನೂ ತನ್ನತ್ತ ಸೆಳೆಯುವ ಶಕ್ತಿ ಇದಕ್ಕಿದೆ. ಅದುವೇ ಅಡಕೆ!

ಅಡಕೆ ಈಗ ಎಲ್ಲ ರೈತರಿಗೂ ಅಚ್ಚುಮೆಚ್ಚು. ವರ್ಷದಿಂದ ವರ್ಷಕ್ಕೆ ಅಡಕೆ ಬೆಳೆ ಪ್ರದೇಶ ವಿಸ್ತರಣೆಯಾಗುತ್ತಿದೆ. ಎರಡು ದಶಕಗಳ ಹಿಂದೆ ಆರಂಭವಾದ ಅಡಕೆ ಬೆಳೆ ವಿಸ್ತರಣೆ ಇಂದಿಗೂ ಮುಂದುವರಿದಿದೆ. ಪ್ರತಿವರ್ಷ ರಾಜ್ಯದಲ್ಲಿ ಕನಿಷ್ಠ 40 ಸಾವಿರ ಎಕರೆ ಸೇರ್ಪಡೆಯಾಗುತ್ತಿದೆ. ಕರೊನಾ ಕಾಲದಲ್ಲಂತೂ ಹಳ್ಳಿಕಡೆ ಮುಖ ಮಾಡಿದವರು ಅಡಕೆ ಬೆಳೆಯತ್ತ ಒಲವು ತೋರಿಸಿದ್ದೇ ಹೆಚ್ಚು. ಕೃಷಿ ಬೆಲೆ ನಿಗದಿ ಆಯೋಗದ ವರದಿ ಪ್ರಕಾರ 2020-21ನೇ ಸಾಲಿನಲ್ಲಿ ರಾಜ್ಯದ ಒಟ್ಟು ಅಡಕೆ ಬೆಳೆಯುವ ಪ್ರದೇಶ 5.51 ಲಕ್ಷ ಎಕರೆಯಾಗಿತ್ತು. ಕಳೆದೊಂದು ದಶಕದ ಅಂಕಿ-ಅಂಶಗಳನ್ನು ಗುರುತಿಸಿದರೆ ಶೇ.133 ಪ್ರದೇಶ ಅಡಕೆ ಬೆಳೆಗೆಂದು ವಿಸ್ತರಣೆಯಾಗಿದೆ. ಒಂದು ಕಾಲದಲ್ಲಿ ಸೀಮಿತ ಇಲ್ಲವೇ ದೇಶಾವರಿ ಅಡಕೆ ಬೆಳೆ ಪ್ರದೇಶ ಎಂದು ಕರೆಸಿಕೊಳ್ಳುತ್ತಿದ್ದ ದಕ್ಷಿಣಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆಗೆ ಸೀಮಿತವಾಗಿದ್ದ ಅಡಕೆ ಇಂದು ಅರೆ ಮಲೆನಾಡು, ಬಯಲುಸೀಮೆಗೂ ವ್ಯಾಪಿಸಿದೆ. ಕರಾವಳಿಯಲ್ಲೂ ಅಡಕೆ ತೋಟಗಳು ತಲೆಎತ್ತಿವೆ.



» ತಪ್ಪದ ದರ ಏರಿಳಿತ

ಮಲೆನಾಡಿನಲ್ಲಿ ಭತ್ತದ ಗದ್ದೆಗಳು ಅಡಕೆ ಸಸಿಗಳಿಗೆ ಜಾಗ ಮಾಡಿಕೊಟ್ಟಿವೆ. ಬಗರ್‌ಹುಕುಂ ಸಾಗುವಳಿ ಪ್ರದೇಶ ಹೆಚ್ಚಳದಲ್ಲಿ ಅಡಕೆ ಪಾತ್ರವೇ ಹೆಚ್ಚು. ಅರೆ ಬಯಲುಸೀಮೆ ಹಾಗೂ ಬಯಲುಸೀಮೆಯ ಮೆಕ್ಕೆಜೋಳದ ಹೊಲಗಳು, ತರಕಾರಿ ಬೆಳೆಯುವ ಬಹುತೇಕ ಜಾಗಗಳು ಅಡಕೆ ತೋಟಗಳಾಗಿ ಮಾರ್ಪಟ್ಟಿವೆ. ವಿಸ್ತರಣೆಯಾಗಿರುವ ಅಡಕೆ ತೋಟಗಳು ಸ್ಥಳೀಯವಾಗಿ ವ್ಯಾಪಕ ಉದ್ಯೋಗ ಸೃಷ್ಟಿಸುತ್ತಿವೆ. ಆಯಾ ಪ್ರದೇಶಕ್ಕೆ ಹೊಂದಿಕೆಯಾಗುವ ಅಡಕೆ ಸಸಿಗಳನ್ನು ಪೂರೈಸುವ ನರ್ಸರಿ ಉದ್ಯಮ ತಲೆ ಎತ್ತಿದೆ. ಕೃಷಿ ಕೂಲಿ ಕಾರ್ಮಿಕರ ಕುಟುಂಬಗಳೂ ಆರ್ಥಿಕವಾಗಿ ಸಬಲಗೊಳ್ಳಲು ಕಾರಣವಾಗಿದೆ. ಇದೆಲ್ಲದರ ಜತೆಗೆ ಮುಂದಿನ ದಿನಗಳಲ್ಲಿ ಬೇಡಿಕೆ-ಪೂರೈಕೆಯ ನಡುವೆ ಕಂದಕ ಸೃಷ್ಟಿಯಾಗುವ ಭೀತಿಯೂ ಇದೆ. ಭವಿಷ್ಯದಲ್ಲಿ ಆಹಾರ ಉತ್ಪಾದನೆ ಮೇಲೂ ಗಂಭೀರ ಪರಿಣಾಮ ಉಂಟಾಗುವ ಆತಂಕ ಕಾಡುತ್ತಿದೆ.

ವಿಸ್ತರಣೆ ತಡೆ ಅಸಾಧ್ಯ: ಅಡಕೆ ಬೆಳೆ ಪ್ರದೇಶ ವಿಸ್ತರಣೆಯಾಗುತ್ತಿರುವು ದರ ಬಗ್ಗೆ ದೊಡ್ಡಮಟ್ಟದ ಚರ್ಚೆಗಳು ಆಗಾಗ ನಡೆಯುತ್ತವೆ. ಆದರೆ ಜಲಾಶಯದ ಅಚ್ಚುಕಟ್ಟು ಪ್ರದೇಶವೇ ಆಗಲಿ, ಮಲೆನಾಡಿನ ಭತ್ತದ ಗದ್ದೆ ಅಥವಾ ಬೇರೆ ಕಡೆಯೇ ಆಗಲಿ ರೈತರು ತಮಗೆ ಬೇಕಾದ ಬೆಳೆ ಬೆಳೆಯಲು ಸ್ವತಂತ್ರರು. ಇಂಥದ್ದೇ ಬೆಳೆ ಬೆಳೆಯಿರಿ ಎಂದು ಅವರಿಗೆ ಸೂಚಿಸುವ ಅಧಿಕಾರ ಯಾರಿಗೂ ಇಲ್ಲ. ಆದರೆ, ಬೆಲೆ ಏರಿಕೆ ಸಂದರ್ಭದಲ್ಲೂ ಬೆಳೆಗಾರರು ಜೀವನಶೈಲಿಯನ್ನು ದೊಡ್ಡಮಟ್ಟದಲ್ಲಿ ಬದಲಾವಣೆ ಮಾಡಿಕೊಳ್ಳುವುದು ಒಳಿತಲ್ಲ. ಅದ್ದೂರಿ ಜೀವನಕ್ಕೆ ಒಗ್ಗಿಕೊಂಡ ಸಂದರ್ಭದಲ್ಲಿ ಬೆಲೆಯಲ್ಲಿ ಸ್ವಲ್ಪ ಕುಸಿತವಾದರೂ ಬೆಳೆಗಾರರು ಕಷ್ಟಕ್ಕೆ ಸಿಲುಕುವುದು ನಿಶ್ಚಿತ. ಒಂದೇ ಬಾರಿ ಅಷ್ಟೂ ಅಡಕೆ ಮಾರಾಟ ಮಾಡುವ ಬದಲು ಹಂತಹಂತವಾಗಿ ಮಾರಾಟ ಮಾಡಬೇಕು. ಆಗ ಸರಾಸರಿ ಬೆಲೆ ಸಿಗುತ್ತದೆ. ಉತ್ತಮ ಧಾರಣೆ ಸಿಕ್ಕಿದಾಗ ಅದನ್ನು ಅನುತ್ಪಾದಕ ವಸ್ತುಗಳ ಮೇಲೆ ಹೂಡಿಕೆ ಮಾಡದೆ ಭವಿಷ್ಯದ ಬಗ್ಗೆ ಚಿಂತನೆ ನಡೆಸಬೇಕು ಎಂಬುದು ಕೃಷಿ ಆರ್ಥಿಕ ತಜ್ಞರ ಕಿವಿಮಾತು.

ವರ್ಷ	ಅಡಕೆ ಬೆಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
2010-2011	43,530
2012-2013	47,237
2013-2014	48,187
3014-2015	49,091
2015-2016	50,820
2016-2017	54,482
2017-2018	59,379
2018-2019	92,177
2019-2020	93,609
2020-2021	1,02,536



ಈ ಬೆಳೆಯತ್ತ ಹೆಚ್ಚಿನ ಒಲವು ಏಕೆ?

● ಅಡಕೆಗೆ ಇರುವ ಬೇಡಿಕೆ ● ಸಬಲ ಮಾರುಕಟ್ಟೆ ವ್ಯವಸ್ಥೆ ● ಸಹಕಾರ ವಲಯದ ಶ್ರೀರಕ್ಷೆ ● ಮುಂಗಡವಾಗಿ ಸಿಗುವ ಹೆಚ್ಚು ಸಾಲ ● ಉದ್ಯೋಗ ಖಾತ್ರಿಯಡಿ ತೋಟ ನಿರ್ಮಿಸಲು ಅವಕಾಶ ● ಮನೆ ಬಾಗಿಲಲ್ಲೂ ಮಾರಾಟಕ್ಕೆ ವ್ಯವಸ್ಥೆ ● ನಿರ್ವಹಣೆ ಸಲೀಸು ಎಂಬ ಅಭಿಪ್ರಾಯ

ಅಡಕೆಗೆ ಆನೆ ಸಾಮರ್ಥ್ಯ

ಅಡಕೆ ಬೆಳೆಗಾರರಿಗೆ ಮುಖ್ಯವಾಗಿ ಸಿಕ್ಕಿರುವುದು ಆಡಳಿತ ವರ್ಗದ ರಕ್ಷಣೆ. ರಾಜಕೀಯ ಚಿತ್ರಣವನ್ನೇ ಬದಲಿಸುವ, ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವ, ಪ್ರತಿಪಕ್ಷ ಸ್ಥಾನದಲ್ಲಿ ಇರುವವರನ್ನು ಅಧಿಕಾರದ ಗದ್ದುಗೆಗೆ ಏರಿಸುವ ಸಾಮರ್ಥ್ಯ ಅಡಕೆಗೆ ಇದೆ. ಇದೇ ಕಾರಣಕ್ಕೆ ಅಡಕೆ ಬೆಳೆಗೆ ಕೊಂಚ ಸಮಸ್ಯೆಯಾದರೂ ಆಡಳಿತ ಯಂತ್ರ, ಎಲ್ಲ ರಾಜಕೀಯ ಪಕ್ಷಗಳೂ ಜಾಗೃತಗೊಳ್ಳುತ್ತವೆ. ಕಳೆದೊಂದು ದಶಕದಿಂದ (ಆದರಲ್ಲೂ ಚುನಾವಣಾ ವರ್ಷಗಳಲ್ಲಿ) ನಡೆದಿರುವ ಆರೋಪ-ಪ್ರತ್ಯಾರೋಪಗಳೇ ಇದಕ್ಕೆ ನಿದರ್ಶನ.

ರಾಶಿ ಇಡಿ ಮಾತ್ರ ಅಡಕೆಯಲ್ಲ

ಬೆಳೆಗಾರರ ಹಾಗೂ ಒಟ್ಟಾರೆ ಸಮಾಜದ ಮನಸ್ಥಿತಿಯೇ ಸದ್ಯ ಬದಲಾಗಿದೆ. ರಾಶಿ ಇಡಿ (ಕೆಂಪಡಕೆ) ಮಾತ್ರ ಅಡಕೆ ಎಂಬಂತೆ ಕೆಲವರು ವರ್ತಿಸುತ್ತಿದ್ದಾರೆ. ಅಡಕೆಯಲ್ಲಿ ಅತ್ಯಂತ ಉತ್ಕೃಷ್ಟ ಎನಿಸಿಕೊಳ್ಳುವ ಸರಕು (ಹಸ), ಎರಡನೇ ಹಂತದ್ದು ಬೆಟ್ಟಿ. ಅದರಲ್ಲೂ ಅಡಕೆ ಸುಲಿಯುವ ಯಂತ್ರಗಳು ಬಂದ ಬಳಿಕ ಸರಕು ಹಾಗೂ ಬೆಟ್ಟಿಯ ಉತ್ಪಾದನೆ ಗಣನೀಯವಾಗಿ ಕುಸಿದಿದೆ. ಇದೇ ಕಾರಣಕ್ಕೆ ಇವೆರಡರ ಬೆಲೆ ಬಹಳ ಸಮಯದಿಂದ ಸ್ಥಿರವಾಗಿದೆ. ರಾಶಿ ಇಡಿ ಉತ್ಪಾದನೆ ಹೆಚ್ಚಿರುವುದರಿಂದ ಇದಕ್ಕೆ ಮಾತ್ರ ಬೆಲೆ ಏರಿಳಿತದ ಬಿಸಿ ಮುಟ್ಟುತ್ತದೆ. ಆದರೆ, ಬೆಳೆಗಾರನ ಕೈಸುಟ್ಟ ನಿದರ್ಶನಗಳು ತೀರಾ ವಿರಳ.

ಪ್ರಸ್ತುತ ಸವಾಲುಗಳು

ಅಡಕೆಗೆ ಎದುರಾಗುವ ರೋಗ ಗಳ ನಿರ್ವಹಣೆ ಮಾರುಕಟ್ಟೆಯ ಏರಿಳಿತ ಅರಿತು ಕೊಳ್ಳುವುದು, ತೋಟಗಳನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳು ವುದು, ಹವಾಮಾನ ವೈಪರೀತ್ಯ ಎದುರಿಸುವುದು.

ಅಡಕೆ ಅಂಕಿ-ಅಂಶ (2020-21ರಂತೆ)	
ರಾಜ್ಯದ ಅಡಕೆ ಬೆಳೆಯುವ ಪ್ರದೇಶ	5.51 ಲಕ್ಷ ಎಕರೆ
ವಾರ್ಷಿಕ ಉತ್ಪಾದನೆ	7.16 ಲಕ್ಷ ಟನ್
ದಶಕದಲ್ಲಿ ಹೆಚ್ಚಳವಾದ ಪ್ರದೇಶ	ಶೇ.133
ಹೆಚ್ಚಾದ ಉತ್ಪಾದನೆ ಪ್ರಮಾಣ	ಶೇ.84
ಅವಲಂಬಿತ ಕುಟುಂಬಗಳು	ಅಂದಾಜು 4 ಲಕ್ಷ
ಅಡಕೆ ಬೆಳೆಯುವ ತಾಲೂಕುಗಳು	144

ಬೆಲೆ ಏರಿಳಿತ

ಕಳೆದೊಂದು ವರ್ಷದಲ್ಲಿ ಅಡಕೆ ಬೆಲೆ ಏರಿಳಿತ ಕಂಡಿದೆ. 2021ರ ಡಿಸೆಂಬರ್‌ನಲ್ಲಿ ಕ್ವಿಂಟಾಲ್‌ಗೆ 46-47 ಸಾವಿರ ರೂ. ಇದ್ದ ಧಾರಣೆ ಈ ವರ್ಷದ ಜನವರಿ, ಫೆಬ್ರವರಿ ವೇಳೆಗೆ 50 ಸಾವಿರ ರೂ. ಗಡಿ ದಾಟಿತು. ಏಪ್ರಿಲ್, ಮೇ, ಜೂನ್‌ನಲ್ಲಿ 52 ಸಾವಿರ ರೂ. ತಲುಪಿತು. ಕಳೆದ ಸೆಪ್ಟೆಂಬರ್‌ನಲ್ಲಿ ಕೆಲವು ಕಡೆಗಳಲ್ಲಿ 53-54 ಸಾವಿರ ರೂ.ಗೂ ಹೋಗಿದ್ದಿದೆ. ಅಕ್ಟೋಬರ್, ನವೆಂಬರ್ ಹೊತ್ತಿಗೆ 48-49 ಸಾವಿರ ರೂ.ಗಳಿಗೆ ಇಳಿಕೆಯಾಯಿತು. ನ.15 ರ ನಂತರ ಮತ್ತಷ್ಟು ಕುಸಿದು ಈಗ ಕ್ವಿಂಟಾಲ್‌ಗೆ 40 ಸಾವಿರ ರೂ.ಗಳ ಆಸುಪಾಸಿಗೆ ಬಂದು ನಿಂತಿದೆ.

ಅಡಕೆ ಧಾರಣೆ ಕುಸಿತಕ್ಕೆ ಆಮದು ಒಂದು ಕಾರಣವಾದರೆ, ಸ್ಥಳೀಯವಾಗಿ ರೈತರ ಮೇಲೂ ಜವಾಬ್ದಾರಿಯಿದೆ. ಅವರು ಅಡಕೆ ಮಾರಾಟ ಮಾಡುವಾಗ ಬಿಲ್‌ಸಹಿತ ವ್ಯವಹಾರ ಮಾಡಬೇಕಾಗುತ್ತದೆ. ಹೆಚ್ಚಿನ ಹಣದ ಆಸೆಗೆ ಬೀಳದೇ ದೇಶದ ಹಿತವನ್ನೂ ನೋಡಬೇಕಾಗುತ್ತದೆ. ಒಟ್ಟಾರೆ ವಹಿವಾಟು ಯಾವುದೇ ಅಕ್ರಮವಿಲ್ಲದಂತೆ ನಡೆದರೆ ಎಲ್ಲವೂ ಸರಿಯಾಗೇ ಇರುತ್ತದೆ.

| ಆರ್.ಎಂ. ರವಿ ತುಮ್‌ಕೋಸ್ ಅಧ್ಯಕ್ಷ

ಅಡಕೆ ಬೆಳೆ ಪ್ರದೇಶದಲ್ಲಿ ಜಿಲ್ಲೆಗಳ ಕೊಡುಗೆ	
ಶಿವಮೊಗ್ಗ	ಶೇ.19
ಉತ್ತರ ಕನ್ನಡ	ಶೇ.17
ಚಿಕ್ಕಮಗಳೂರು	ಶೇ.15
ದಾವಣಗೆರೆ	ಶೇ.14
ದಕ್ಷಿಣ ಕನ್ನಡ	ಶೇ.14
ತುಮಕೂರು	ಶೇ.12

twitter.com/v

ವಿಕ ಸೂಪರ್ ಸ್ಟಾರ್ ರೈತ ಐದನೇ ಆವೃತ್ತಿಗೆ ವಿಧ್ಯುಕ್ತ ಚಾಲನೆ । ಚಿತ್ರದುರ್ಗದಲ್ಲಿ ಕೃಷಿ ಚಿಂತನ ಮಂಥನ

ಕೋಟೆನಾಡಿನ ಸಾಧಕ ರೈತರಿಗೆ ವಿಕ ಪುರಸ್ಕಾರ

■ ವಿಕ ಸುದ್ದಿಲೋಕ ಚಿತ್ರದುರ್ಗ

ಜಿಲ್ಲೆಯ ರೈತರಿಗೆ ನೀರಿನ ಸಮಸ್ಯೆ ಬಗೆಹರಿಯುತ್ತಿದ್ದು ಹಿತ ಮಿತವಾದ ನೀರಿನ ಬಳಕೆಯಲ್ಲದೆ, ಬಹು ಬೆಳೆ ಆಯ್ಕೆ, ವ್ಯಾವಹಾರಿಕ ಜಾಣತನವು ಲಾಭದಾಯಕ ಕೃಷಿಗೆ ಪೂರಕ ಎಂದು ಚಿತ್ರ ದುರ್ಗ ಜಿಲ್ಲಾ ಮಟ್ಟದ 5ನೇ ವರ್ಷದ ವಿಕ ಸೂಪರ್ ಸ್ಟಾರ್ ರೈತ 2022 ಪುರಸ್ಕಾರ ಸಮಾರಂಭದಲ್ಲಿ ತಜ್ಞರು ಅಭಿಪ್ರಾಯಪಟ್ಟರು.





ಚಿತ್ರದುರ್ಗದ ಜಿಲ್ಲಾಕ್ರೀಡಾ ಭವನದಲ್ಲಿ ಶುಕ್ರವಾರ ನಡೆದ ವಿಕ ಸೂಪರ್ ಸ್ಟಾರ್ ರೈತ ಕಾರ್ಯಕ್ರಮದಲ್ಲಿ ಹಿರಿಯೂರು ತಾಲೂಕಿನ ಸೂರಪ್ಪನ ಹಟ್ಟಿಯ ದಿವ್ಯಾಂಗ ಸಿ. ಬಾಲಣ್ಣ ಚಿತ್ರದುರ್ಗ ತಾಲೂಕಿನ ಹಳವುದರ ಗ್ರಾಮದ ಟಿ. ನಿಂಗಾನಾಯ್ಕ, ಚಳ್ಳಕೆರೆ ತಾಲೂಕಿನ ಗುಡಿಹಳ್ಳಿ ರಂಗಪ್ಪ ಹೊಳಲ್ಕೆರೆ ತಾಲೂಕಿನ ಕುಡಿನೀರುಕಟ್ಟೆ ಬಿ.ಕೆ. ಮಂಜುನಾಥ್, ಮೊಳಕಾಲ್ಮೂರು ತಾಲೂಕಿನ ಗೌಡರಹಟ್ಟ ಗೌಡ್ರು ಸಣ್ಣಪಾಲಯ್ಯ, ಹೊಸದುರ್ಗ ತಾಲೂಕಿನ ಕೃಷ್ಣಾಪುರದ ಮಂಜುನಾಥ್ ಅವರಿಗೆ ಸೂಪರ್ ಸ್ಟಾರ್ ಜಿಲ್ಲಾಮಟ್ಟದ ಸಾಧಕ ರೈತ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಸಕ್ತ ಸಾಲಿನಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದ ಅನ್ನದಾತರನ್ನು ಗುರುತಿಸುವ ರಾಜ್ಯದ ಮೊದಲ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದ್ದು ಚಿಂತನ ಮಂಥನವೂ ಕಳೆಗಟ್ಟಿತ್ತು.

ಐತಿಹಾಸಿಕ ಕೋಟೆ ನಗರಿ ಚಿತ್ರದುರ್ಗ ಜಿಲ್ಲಾ ಕ್ರೀಡಾ ಭವನದಲ್ಲಿ ಶುಕ್ರವಾರ ತುಂಬುವ ರೈತರಿಗೆ ಪ್ರೋತ್ಸಾಹ ನೀಡುವುದು, ಗೌರವಿಸುವುದು ಕಡಿಮೆ. ರೈತರ ಮಕ್ಕಳು ನಾನು ರೈತನ ಮಗ ಎಂದು ಹೇಳಿಕೊಳ್ಳಲು ಮುಜುಗರ ಪಟ್ಟುಕೊಳ್ಳುತ್ತಾರೆ. ಆಂಥ ಮನಸ್ಥಿತಿಯನ್ನು ವಿಕ ಸೂಪರ್ ಸ್ಟಾರ್ ರೈತ ಹೋಗಲಾಡಿಸುತ್ತದೆ'' ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಜಿಲ್ಲೆಯ ಆರು ಸಾಧಕರಿಗೆ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಮಾಡಿದ ರಾಂಪುರ ಡಿಕೆಆರ್ ಗ್ರೂಪ್ಸ್ ಮಾಲೀಕ ಎಂ.ಡಿ. ಮಂಜುನಾಥ, ''ಹವಾಮಾನ ವೈಪರೀತ್ಯದಿಂದ ಆಗುವಂತಹ ತೊಂದರೆಗಳಿಂದ ರೈತರು ಹೊರಗೆ ಬರಬೇಕಾದರೆ ಅವರಿಗೆ ಸೂಕ್ತ ಮಾಹಿತಿ ಬೇಕಿದೆ. ವಾತಾವರಣಕ್ಕೆ ತಕ್ಕಂತೆ ಬೆಳೆಗಳನ್ನು ಬೆಳೆಯುವುದು, ಮಾರುಕಟ್ಟೆಯ ಬದಲಾವಣೆ, ಬೇಡಿಕೆಗೆ ತಕ್ಕಂತೆ ಕೃಷಿ ಕಾಯಕದ ಮಾಹಿತಿ ಪಡೆದರೆ ಮುಂದಿನ ದಿನಗಳಲ್ಲಿ ಸಮಸ್ಯೆಗೆ ಪರಿಹಾರ ಒದಗಿಸಿದಂತಾಗಲಿದೆ'' ಎಂದರು.

ಪಾರ್ವತಿ ಫೋರ್ಸ್ ಟ್ಯಾಕ್ಟರ್ ಮಾಲೀಕರಾದ ಜಿ.ಎನ್. ರಾಣಿ, ತೋಟಗಾರಿಕೆ ಸಹಾಯಕ ನಿರ್ದೇಶಕ ಟಿ. ಆರ್. ಯಶ್ವಂತ್‌ಕುಮಾರ್, ವಿಕ ದಾವಣಗೆರೆ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ ಪ್ರಾಸ್ತಾವಿಕ ಮಾತನಾಡಿ, ರೈತರ ಸಂವಾದ ನಡೆಸಿಕೊಟ್ಟರು. ರೈತ ಧುರೀಣರಾದ ಕೆ.ಪಿ. ಭೂತಯ್ಯ, ಹೊರಕೇರಪ್ಪ, ಸಿಪಿಐನ ದೊಡ್ಡ ಉಳ್ಳರ್ತಿ ಕರಿಯಣ್ಣ, ಜಿ.ಸಿ. ಸುರೇಶ್ ಬಾಬು ಸಂವಾದದಲ್ಲಿ ಭಾಗವಹಿಸಿದ್ದರು.

> ಮಕ್ಕಳಿಗೆ ನಮ್ಮ ತಂದೆ ರೈತ ಎಂಬ ಅಭಿಮಾನ ಬರಬೇಕು ಎಂಬ ಉದ್ದೇಶಕ್ಕೆ ರೈತರ ಮಕ್ಕಳಿಗೆ ಸ್ಕಾಲರ್ ಶಿಪ್ ಕೊಡುವ ಹೊಸ ಯೋಜನೆಯನ್ನು ಈ ಸರಕಾರ ಜಾರಿಗೊಳಿಸಿತು. ರೈತರ ಮಕ್ಕಳಿಗೆ 2 ಸಾವಿರದಿಂದ 11 ಸಾವಿರದವರೆಗೆ ಸ್ಕಾಲರ್‌ಶಿಪ್ ಕೊಡುವ ಯೋಜನೆ ಜಾರಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಾರ್ಗಸೂಚಿ ತಯಾರಿಸಿದ ಹೆಮ್ಮೆ ನನಗಿದೆ.
>
> -ಎಂ.ಎಸ್. ದಿವಾಕರ್
> ಜೆಪಂ ಸಿಇಒ, ಚಿತ್ರದುರ್ಗ

ಕಳೆಗಟ್ಟಿದ ವಿಕ ಸಂವಾದ

ದಾಳಿಂಬೆ, ಈರುಳ್ಳಿ ಮತ್ತಿತರ ವಾಣಿಜ್ಯ ಬೆಳೆ ಬೆಳೆಗಾಗಿ ಸಾಲದ ಕೂಪದಲ್ಲಿ ಸಿಲುಕಿಕೊಳ್ಳುವುದು, ಬೆಳೆ ವಿಮೆ ಹೆಸರಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯ, ಎವಿ ಸಾಗರ ತುಂಬಿದ್ದ ವೇದಾವತಿ ಪಾತ್ರದಲ್ಲಿ ಹೊಸ ಕೃಷಿ ಪ್ರಕ್ರಿಯೆಗೆ ಸರಕಾರದ ಉಪಕ್ರಮವೇನು ಎಂಬುದು ಸೇರಿದಂತೆ ಜಿಲ್ಲೆಯ ಮಹತ್ವದ ಕೃಷಿ ಸವಾಲುಗಳ ಕುರಿತಾಗಿ ಕೃಷಿ ಅಧಿಕಾರಿಗಳು, ಬ್ಯಾಂಕ್ ಮತ್ತಿತರ ತಜ್ಞರು, ರೈತ ಹೋರಾಟಗಾರ ರೊಳಗೊಂಡ ಚರ್ಚೆ ನಡೆಯಿತು. ಬದಲಾದ ಹವಾಮಾನದಲ್ಲಿ ಬೆಳೆಗಳ ನಿರ್ವಹಣೆ, ಪರ್ಯಾಯ ತೋಟಗಾರಿಕೆ ಬೆಳೆಗಳ ಕುರಿತು ನಡೆದ ಸಂವಾದದಲ್ಲಿ ಚಿತ್ರದುರ್ಗ ಕೃಷಿ ಇಲಾಖೆ ಉಪನಿರ್ದೇಶಕ ಬಿ.ಎನ್. ಪ್ರಭಾಕರ್, ''ರೈತರು ಉತ್ಪಾದಿಸುವ ಉತ್ಪನ್ನಗಳಿಗೆ ತಾವೇ ದರ ನಿಗದಿಪಡಿಸಿಕೊಂಡು ವ್ಯಾಪಾರಸ್ಥರಾದರೆ ಉತ್ತಮ ಆದಾಯಗಳಿಸಲು ಸಾಧ್ಯ. ಎಫ್‌ಪಿಒ ಸ್ಥಾಪಿಸಿಕೊಂಡರೆ ಕೃಷಿ ಉತ್ಪನ್ನಗಳಿಗೆ ದರ ನಿಗದಿಪಡಿಸಿಕೊಳ್ಳಲು ಸಹಕಾರಿಯಾಗಲಿದೆ,'' ಎಂದರು.

17-12-2022
V-karantaka Pg 11

Texprocil to brand cotton using 'Kasturi' label from this season

M. Soundariya Preetha
COIMBATORE



The Cotton Textiles Export Promotion Council (Texprocil) has said it will start branding and labelling of Indian cotton under the 'Kasturi' brand from the current season. Texprocil and the Cotton Corporation of India had signed an MoU to this effect.

The end customer can get the complete traceability details on a blockchain-based software platform and also via QR code, Texprocil chairman Sunil Patwari said. Texprocil ED Siddhartha Rajagopal said 'Kasturi' would be a specifications-based branding and benchmarked to international standards.

Farmers, traders and spinners could apply to get the cotton tested for 'Kasturi' branding, he said.

17-12-2022
Hindu Pg 14